ನಬಾರ್ಡ್‌ನಿಂದ ಲೋಕೋಪಯೋಗಿ ಇಲಾಖೆಯವರು ಸಾಲ ತೆಗೆದು ಕೊಂಡಿರುವುದರ ಬಗ್ಗೆ.

1710 (1994) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕಳೆದ 3 ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯವರು ನಬಾರ್ಡ್‌ನಿಂದ ರಸ್ತೆ ಮತ್ತು ಸೇತುವೆ ಸಲುವಾಗಿ ಎಷ್ಟು ಸಾಲವನ್ನು ತೆಗೆದುಕೊಂಡಿರುವರು;

ಆ) ಈಗಾಗಲೇ ನಬಾರ್ಡ್‌ನಿಂದ ಎಷ್ಟು ಹಣ ಬಿಡುಗಡೆ ಆಗಿದೆ; ಹಾಗೂ ಷರತ್ತಿನ ಮೇಲೆ (ಟರ್ಮ್ಸ್ ಅಂಡ್ ಕಂಡಿಷನ್ಸ್) ಮೇಲೆ ಸಾಲ ಪಡೆಯಲಾಗಿದೆ;

ಇ) ಅಸಲು ಮತ್ತು ಬಡ್ಡಿ ಎಂದಿನಿಂದ ಕೊಡಬೇಕಾಗುವುದು ಮತ್ತು ಎಷ್ಟು ಕೊಡಬೇಕಾಗುವುದು? (ವಿವರ ನೀಡಿ)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ಲೋಕೋಪಯೋಗಿ ಇಲಾಖೆಯಡಿ 96-97ನೇ ಸಾಲಿನಿಂದ ಈವರೆಗೆ ರೂ.458.72 ಕೋಟಿ ಸಾಲ ಸಹಾಯ ಮಂಜೂರಾಗಿದೆ.

ಆ) ಈವರೆಗೆ 212.65 ಕೋಟಿ ರೂ ಸಾಲ ಬಿಡುಗಡೆಯಾಗಿದೆ. ಈ ಸಾಲವನ್ನು ಸಾಲಪಡೆದ ದಿನಾಂಕದ ಮೂರು ವರ್ಷಗಳ ನಂತರದ ದಿನಾಂಕದಿಂದ ಮೂರು ವರ್ಷಗಳಲ್ಲಿ ಸಮನಾಗಿ ಅಸಲನ್ನು ಹಿಂದಿರುಗಿಸಬೇಕಿದೆ.

ಇ) ಅಸಲನ್ನು 2001ರಿಂದ ಪಾವತಿಸಬೇಕಿರುತ್ತದೆ. ಬಡ್ಡಿಯನ್ನು ಸಾಲದ ಮೊತ್ತದ ಶೇಕಡ 12ರಷ್ಟು ಸಾಲ ಪಡೆದಂದಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಪಾವತಿಸಬೇಕಿರುತ್ತದೆ.

ಪ್ರವಾಸೋದ್ಯಮ ಇಲಾಖೆ ಹಾಕಿಕೊಂಡ ಯೋಜನೆಗಳು

1711 (1995) ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳೆಸುವ ಸಲುವಾಗಿ ಸರ್ಕಾರದವರು ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿರುವರು;

ಆ) ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳೆಸುವ ಯಾವ ಯೋಜನೆಗಳನ್ನು ಹಾಕಿಕೊಂಡಿರುವರು;

ಇ) ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯವರು ಬೆಳಗಾವಿ ಜಿಲ್ಲೆ ತೆನಿಕೊಳ ಹಾಗೂ ಶ್ರೀ ಕ್ಷೇತ್ರ ಸೋಗಲದಲ್ಲಿ ಹೊನಲು ಬೆಳಕು ಯೋಜನೆ (ಫ್ಲಡ್‌ಲೈಟ್) ಕೈಗೊಳ್ಳಲು (ತೆನಿಕೊಳ. ರೂ,10.00ಲಕ್ಷ ಹಾಗೂ ಶ್ರೀ ಕ್ಷೇತ್ರ ಸೋಗಲ ರೂ 25.00 ಲಕ್ಷಗಳು) ಅಂದಾಜು ವೆಚ್ಚ ಪತ್ರಿಕೆ ಕಳಿಸಲು ಸೂಚಿಸಿದ ಪ್ರಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? ಹಾಗಿದ್ದಲ್ಲಿ ಅಂದಾಜು ವೆಚ್ಚ ಪತ್ರಿಕೆ ಕಳುಹಿಸಿ ಕೂಡಲೇ ಮಂಜೂರಾತಿ ಪಡೆಯಲಾಗುವುದೇ?

ಶ್ರೀ ಆರ್.ರೋಷನ್ ಬೇಗ್ ಪ್ರವಾಸೋದ್ಯಮ ಮತ್ತು ಹಜ್ ಸಚಿವರು.

ಅ) ಪ್ರವಾಸೋದ್ಯಮ ಇಲಾಖೆಯು ಖಾಸಗೀ ಹಾಗೂ ಸರ್ಕಾರದ ಬಂಡವಾಳ ಹೂಡಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ತಯಾರಿಸಿದೆ.

ನೂತನ ಪ್ರವಾಸೋದ್ಯಮ ನೀತಿಯನ್ನು 1-6-97 ರಿಂದ ಜಾರಿಗೆ ತರಲಾಗಿದೆ. ಈ ನೀತಿಯ ಅಡಿಯಲ್ಲಿ ಖಾಸಗಿ ಉದ್ದಿಮೆದಾರರಿಗೆ ಪ್ರವಾಸೋದ್ಯಮದಲ್ಲಿ ಬಂಡವಾಳ ಹೂಡಲು ವಿವಿಧ ರೀತಿಯ ರಿಯಾಯಿತಿ ಹಾಗೂ ಸಹಾಯಧನವನ್ನು ಉತ್ತೇಜನವಾಗಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ಹಂಪಿ, ಜೋಗ್ ಮತ್ತು ಕರಾವಳಿ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಪ್ರತ್ಯೇಕ ಅಧ್ಯಯನ ವರದಿಗಳನ್ನು ನೀಡಲು ನುರಿತ ಸಂಸ್ಥೆಗಳಿಗೆ ವಹಿಸಲಾಗಿದೆ.

ಕಳೆದ ಸಾಲಿನಲ್ಲಿ ರೂ 710.00ಲಕ್ಷಗಳನ್ನು ಸದರಿ ಯೋಜನೆಗಳ ಅನುಷ್ಠಾನಕ್ಕಾಗಿ ಒದಗಿಸಲಾಗಿದೆ.

ಆ) ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ಬೆಳಗಾವಿ ಜಿಲ್ಲೆಯ ತನಿಕೊಳ ಮತ್ತು ಶ್ರೀ ಕ್ಷೇತ್ರ ಸೋಗಲಗಳಿಗೆ ಹೊನಲು ಬೆಳಕಿನ ಯೋಜನೆಗಳಿಗೆ ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಯಾವುದೇ ಸೂಚನೆಗಳನ್ನು ನೀಡಿರುವುದಿಲ್ಲ.

ಉದ್ಭವಿಸುವುದಿಲ್ಲ

ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ಯೋಜನೆಗಳ ಪಟ್ಟಿ

ಕ್ರಮ ಸಂಖ್ಯೆ	ಯೋಜನೆಗಳ ವಿವರ	ತಗುಲುವ ವೆಚ್ಚ (ರೂ.ಲಕ್ಷಗಳಲ್ಲಿ)
		ರೂ.
1.	ಬೆಳಗಾವಿಯ ಕಿಲ್ಲಾ ಕೆರೆಗೆ ಜಟ್ಟಿ ನಿರ್ಮಾಣ	5.00
2.	ಯೋಗಿಕೊಳ್ಳ ಕೂಡುರಸ್ತೆ ಅಭಿವೃದ್ಧಿ	5.00
3.	ಗೋಕಾಕ್ ತಾಲ್ಲೂಕಿನ ಗೊಡಚನಮಲ್ಕಿಯಲ್ಲಿ ಯಾತ್ರಿ ನಿವಾಸ	5.00
4.	ಮದನವಾಲದಲ್ಲಿ ಯಾತ್ರಿ ನಿವಾಸ	5.00
5.	ಅಮ್ಮಣಗಿಯಲ್ಲಿ ಯಾತ್ರಿ ನಿವಾಸ	5.00
6.	ಖಿಳೇಗಾಂವನಲ್ಲಿ ಯಾತ್ರಿ ನಿವಾಸ	14.85

1	2	3
7.	ಸಿದ್ದ ಸಂಸ್ಥಾನ ಮಠ ರಸ್ತೆ ಅಭಿವೃದ್ಧಿ	1.00
8.	ಕಿತ್ತೂರು ಕೋಟೆಗೆ ದೀಪಾಲಂಕಾರ	20.00
9.	ಚಿಕ್ಕೋಡಿ ತಾಲ್ಲೂಕು ಕಲ್ಲೋಳ ಹಾಗೂ ಯಡೂರು ಗ್ರಾಮಗಳ ಮಧ್ಯೆ ಯಾತ್ರಿ ನಿವಾಸ	5.00
10.	ಚಿಕ್ಕೋಡಿ ತಾಲ್ಲೂಕಿನ ಯಡೂರು ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಕಾಗವಾಡರಸ್ತೆ ಅಭಿವೃದ್ಧಿ	7.00
11.	ಅಥಣಿ ತಾಲ್ಲೂಕು ಯಲ್ಲಮ್ಮನ ವಾಡಿಯಲ್ಲಿರುವ ಯಲ್ಲಮ್ಮನ ದೇವಸ್ಥಾನಕ್ಕೆ ರಸ್ತೆ ಅಭಿವೃದ್ಧಿ	8.00
12.	ಸದಲಗಾದ ವೇದಕಾಡ ಸಿದ್ದೇಶ್ವರ ದೇವಸ್ಥಾನ ರಸ್ತೆ ಅಭಿವೃದ್ಧಿ	5.00
13.	ಬೆಡಕಿನಾಳ ರಸ್ತೆ ಅಭಿವೃದ್ಧಿ	5.00
14.	ಬೈರನಹಟ್ಟಿಯಲ್ಲಿ ಯಾತ್ರಿ ನಿವಾಸ	7.00

ಕೇಂದ್ರ ರಸ್ತೆ ನಿಧಿ (ಸಿಆರ್‌ಎಫ್)ಯಲ್ಲಿ ಜತ್ ಜಾಂಬೋಟ ರಸ್ತೆಯ ಅಭಿವೃದ್ಧಿ.

1712 (1996) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನಲ್ಲಿ ಜತ್-ಜಾಂಬೋಟಿ ರಸ್ತೆ (ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆ) ಯನ್ನು ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಯಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿದ ಮೊತ್ತ ಎಷ್ಟು;

ಆ) ಎರಡನೇ ಹಂತದ ಕೆಲಸದ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಎಂದು ಸಲ್ಲಿಸಲಾಗಿದೆ;

ಇ) ಕೂಡಲೇ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆಯನ್ನು ಪೂರ್ಣ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ಈ ಕಾಮಗಾರಿಗೆ ಕೇಂದ್ರ ಸರ್ಕಾರ ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ರೂ.66.00 ಲಕ್ಷಗಳನ್ನು ಮಂಜೂರು ಮಾಡಿದೆ.

ಆ) ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುವುದಿಲ್ಲ.

ಇ) ಈ ರಸ್ತೆಯ ಉಳಿಕೆ ಭಾಗದ ಕಾಮಗಾರಿಗೆ ಹೊಸದಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು.